# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 944
ಮಾನ್ಯ ಸದಸ್ಯರ ಹೆಸರು : ಶ್ರೀ ಐವನ್ ಡಿ'ಸೋಜಾ
(ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 17/12/2024
ಉತ್ತರಿಸುವ ಸಚಿವರು : ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಬೈಕಂಪಾಡಿ ಎಪಿಎಂಸಿ ಮಾರುಕಟ್ಟೆ ಕಟ್ಟಡ ಮತ್ತು ಗೋಡಾನ್‌ಗಳನ್ನು ಕಟ್ಟಲಾಗಿದ್ದು, ಇದು ಕಾರ್ಯ ನಿರ್ವಹಿಸದೇ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟವನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | -ಬಂದಿರುವುದಿಲ್ಲ- |
| (ಆ) | ಬೈಕಂಪಾಡಿ ಎಪಿಎಂಸಿ ಮಾರುಕಟ್ಟೆಯ ವ್ಯಾಪಾರಸ್ಥರು ವ್ಯವಹಾರ ನಡೆಸದೇ ಇಲಾಖೆಯ ಅಧಿಕಾರಿಗಳೊಂದಿಗೆ ಸೇರಿಕೊಂಡು ಮಾರುಕಟ್ಟೆಯ ಶುಲ್ಕ ಕಟ್ಟದಿರು ವುದು ನಿಜವೇ, ಇಲಾಖೆ ಕ್ರಮ ಕೈಗೊಂಡಿದೆಯೇ (ವಿವರ ನೀಡು ವುದು) | ಬೈಕಂಪಾಡಿ ಎಪಿಎಂಸಿ ಮಾರುಕಟ್ಟೆಯ ವ್ಯಾಪಾರಸ್ಥರು ಪ್ರಾಂಗಣದಲ್ಲಿ ವ್ಯಾಪಾರ ವಹಿವಾಟು ನಡೆಸಿ ನಿಯಮಾನುಸಾರ ಮಾರುಕಟ್ಟೆ ಶುಲ್ಕ ಪಾವತಿ ಸುತ್ತಿದ್ದಾರೆ. ಪ್ರಾಂಗಣದ ಪ್ರವೇಶ ದ್ವಾರದಲ್ಲಿ ಸಿಬ್ಬಂದಿ ಗಳನ್ನು ನಿಯೋಜಿಸಿ ಮಾರುಕಟ್ಟೆ ಶುಲ್ಕ ಸೋರಿಕೆ ಯಾಗದಂತೆ ಕಟ್ಟುನಿಟ್ಟಿನ ನಿಯಂತ್ರಣ ಕ್ರಮ ಕೈಗೊಳ್ಳಲಾಗಿದೆ.<br><br>ಕಳೆದ ಮೂರು ವರ್ಷಗಳಲ್ಲಿ ಸಮಿತಿಗೆ ಪಾವತಿಸಿದ ಮಾರುಕಟ್ಟೆ ಶುಲ್ಕದ ಹಾಗೂ ಬಳಕೆದಾರರ ಶುಲ್ಕದ ವಿವರ ಈ ಕೆಳಕಂಡಂತಿರುತ್ತದೆ :- |

**ಮಾರುಕಟ್ಟೆ ಶುಲ್ಕ (ಲಕ್ಷಗಳಲ್ಲಿ)**

| ಕ್ರ.ಸಂ | 2022-23 | 2023-24 | 2024-25 (ನವೆಂಬರ್ ಅಂತ್ಯಕ್ಕೆ) |
|---|---|---|---|
| ಗುರಿ | 465.00 | 650.00 | 700 |
| ಸಾಧನೆ | 495.80 | 530.77 | 555.78 |
| **ಶೇಕಡ** | **106.62** | **81.86** | **79.39** |

**ಬಳಕೆದಾರರ ಶುಲ್ಕ (ಲಕ್ಷಗಳಲ್ಲಿ)**

| ಕ್ರ.ಸಂ | 2022-23 | 2023-24 | 2024-25 (ನವೆಂಬರ್ ಅಂತ್ಯಕ್ಕೆ) |
|---|---|---|---|
| ಗುರಿ | 31.00 | 50.00 | 10.00 |
| ಸಾಧನೆ | 6.89 | 5.82 | 4.75 |
| **ಶೇಕಡ** | **22.23** | **11.54** | **47.5** |

| | | |
|---|---|---|
| (ಇ) | ಬೈಕಂಪಾಡಿ ಎಪಿಎಂಸಿ ಯಲ್ಲಿ ನಿರ್ಮಾಣ ಮಾಡಿದ ಗೋಡಾನ್‌ಗಳ ಸಂಖ್ಯೆ ಎಷ್ಟು; ಖಾಲಿ ಇರುವ ಗೋಡಾನ್‌ಗಳು ಎಷ್ಟು (ವಿವರ ನೀಡುವುದು) | ನಿರ್ಮಾಣ ಮಾಡಿದ ಗೋದಾಮುಗಳು – 164<br>ಖಾಲಿ ಇರುವ ಗೋದಾಮುಗಳು -122<br>(ವಿವರವನ್ನು **ಅನುಬಂಧ** ದಲ್ಲಿ ಒದಗಿಸಿದೆ) |
| (ಈ) | ರೈತರು ಬೆಳೆದ ವಸ್ತುಗಳನ್ನು ಎಪಿಎಂಸಿ ಮಾರುಕಟ್ಟೆಗೆ ತರದೇ ಬೇರೆ ಕಡೆ ವ್ಯಾಪಾರ ನಡೆಸುತ್ತಿರುವ ವ್ಯಾಪಾರಸ್ಥರ ಸಂಖ್ಯೆ ಎಷ್ಟು?(ವಿವರ ನೀಡುವುದು) | ಮಂಗಳೂರು ತಾಲೂಕು ಪೂರ್ಣವಾಗಿ ಎಪಿಎಂಸಿ ಮಂಗಳೂರಿನ ನಿಯಂತ್ರಣ ಕಕ್ಷೆಗೆ ಒಳಪಟ್ಟಿರುತ್ತದೆ. ರೈತರು ಬೆಳೆದ ಕೃಷಿ ಹುಟ್ಟುವಳಿಗಳನ್ನು ಮಂಗಳೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ವ್ಯಾಪಾರ ವಹಿವಾಟು ನಡೆಸುತ್ತಿದ್ದು, ಸಮಿತಿಯಿಂದ ಪರವಾನಗಿ ಪಡೆಯದೆ ಕಾನೂನು ಬಾಹಿರವಾಗಿ ವ್ಯಾಪಾರ ನಡೆಸುತ್ತಿರುವವರು ಕಂಡುಬಂದಿರುವುದಿಲ್ಲ. |
| ಉ) | ಅಡಿಕೆ ವ್ಯಾಪಾರ ಮಾಡುತ್ತಿರುವ ವ್ಯಾಪಾರಸ್ಥರಿಗೆ ಯಾವ ನಿಯಮ ಅನ್ವಯಿಸುತ್ತದೆ ? (ವಿವರ ನೀಡು ವುದು) | ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966 ಹಾಗೂ 1968ರಲ್ಲಿನ ನಿಯಮಗಳು ಅನ್ವಯಿಸುತ್ತವೆ. |

**ಸಂಖ್ಯೆ: ಸಿಒ 315 ಎಂಆರ್‌ಇ 2024**

(**ಶಿವಾನಂದ ಎಸ್. ಪಾಟೀಲ**)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು

<u>ಕರ್ನಾಟಕ ವಿಧಾನ ಪರಿಷತ್ತು</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 944

ಮಾನ್ಯ ಸದಸ್ಯರ ಹೆಸರು : ಶ್ರೀ ಐವನ್ ಡಿ'ಸೋಜಾ

ಉತ್ತರಿಸಬೇಕಾದ ದಿನಾಂಕ : 13-12-2024

<u>ವಿಷಯ: ಬೈಕಂಪಾಡಿ ಎ.ಪಿ.ಎಂ.ಸಿ. ಮಾರುಕಟ್ಟೆ ಕಟ್ಟಡದ ಬಗ್ಗೆ.</u>

ಪ್ರಶ್ನೆ: ಇ) ಬೈಕಂಪಾಡಿ ಎಪಿಎಂಸಿ ಯಲ್ಲಿ ನಿರ್ಮಾಣ ಮಾಡಿದ ಗೋಡಾನ್‌ಗಳ ಸಂಖ್ಯೆ ಎಷ್ಟು? ಖಾಲಿ ಇರುವ ಗೋಡಾನ್‌ಗಳು ಎಷ್ಟು? (ವಿವರ ನೀಡುವುದು)

**ಉತ್ತರ:** ಈ ಕೆಳಗಿನ ಅನುಬಂಧದಲ್ಲಿ ಮಾಹಿತಿ ಸಲ್ಲಿಸಿದೆ.

<u>ಅನುಬಂಧ</u>

| ಕ್ರ. ಸಂ | ಸಮಿತಿ ಪ್ರಾಂಗಣದ ಹೆಸರು (ಮುಖ್ಯ/ಉಪ ಮಾರುಕಟ್ಟೆ) | ಸಮಿತಿ ಪ್ರಾಂಗಣದಲ್ಲಿ ನಿರ್ಮಿಸಿರುವ ಗೋದಾಮುಗಳ ಸಂಖ್ಯೆ ಮತ್ತು ಸಾಮರ್ಥ್ಯ | | ಯಾವ ಯೋಜನೆ - ಯಡಿಯಲ್ಲಿ ನಿರ್ಮಿಸಲಾಗಿದೆ ಹಾಗೂ ವರ್ಷ | ಖಾಲಿ ಇರುವ ಗೋದಾಮುಗಳ ಸಂಖ್ಯೆ ಮತ್ತು ಸಾಮರ್ಥ್ಯ | |
|---|---|---|---|---|---|---|
| | | ಸಂಖ್ಯೆ | ಸಾಮರ್ಥ್ಯ | | ಸಂಖ್ಯೆ | ಸಾಮರ್ಥ್ಯ |
| 01 | ಬೈಕಂಪಾಡಿ ಮುಖ್ಯ ಮಾರುಕಟ್ಟೆ ಪ್ರಾಂಗಣ | 164 | 70 ಮೆ. ಟನ್ | ವಾರ್ಷಿಕ ಕ್ರಿಯಾ ಯೋಜನೆಯಡಿ 1999 ನೇ ಇಸವಿಯಲ್ಲಿ ನಿರ್ಮಿಸಲಾಗಿದೆ. | 122 | 70 ಮೆ.ಟನ್ |

**ಹೆಚ್ಚುವರಿ ನಿರ್ದೇಶಕರು (ಆಡಳಿತ)**

Scanned with OKEN Scanne